## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 270/**19** |

| | | |
|---|---|---|
| ಸಾಕ್ಷಿದಾರರ ಹೆಸರು | ಮುಜಾಮೀಲ್ | |
| ತಂದೆಯ ಹೆಸರು | ಪೀರಖಾನ್ ಶರೀಫ | ಸಾಕ್ಷಿಗೆ ದಿಃ **18.07.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **32** ವರ್ಷ | |
| ಉದ್ಯೋಗ | ಹಣ್ಣಿನ ವ್ಯಾಪಾರ | ಪಿ.ಡಬ್ಲ್ಯೂ **-09** |
| ವಾಸ ಸ್ಥಳ | ಮೈಸೂರು | ಸಿ.ಡಬ್ಲ್ಯೂ **-08** |

## ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ದಿಃ 01.08.2019 ರಂದು ಮಧ್ಯಾಹ್ನ 2.30 ಗಂಟೆಯಿಂದ 3.45 ಗಂಟೆಯವರೆಗೆ ಪೊಲೀಸರು ಅಮಾನತ್ತು ಪಂಚನಾಮೆಯ ಮಾಡಿ ಸಹಿ ತೆಗೆದುಕೊಂಡಿರುತ್ತಾರೆ. ಪಂಚನಾಮೆಯನ್ನು ನಿಪಿ-9 ಎಂದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪೋಟೋಗಳನ್ನು ಗುರುತಿಸಿದ್ದು, ಪೋಟೋಗಳನ್ನು ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಯಿತು. ಸದರಿ ಪೋಟೋಗಳನ್ನು Government House ಅಲ್ಲಿ ತೆಗೆದಿರುತ್ತಾರೆ. ಆ ಸಮಯಕ್ಕೆ ನಾನು, ಸಾಕ್ಷಿ ವಾಸಿಂ, ಮತ್ತು ಆರೋಪಿ ಹಾಗೂ ಪೊಲೀಸರು ಹಾಜರು ಇದ್ದೆವು. ಪಂಚನಾಮೆಯನ್ನು ಸ್ಥಳದಲ್ಲೇ ಬರೆದಿರುತ್ತಾರೆ. ಆರೋಪಿ ಪೊಲೀಸರಿಗೆ ಏನು ತೋರಿಸಿದನು ಎನ್ನುವುದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಚಾಕು ಆರೋಪಿಯ ಕೈಯಲ್ಲಿ ಇತ್ತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಚಾಕುವನ್ನು ಗುರುತಿಸಿದ್ದು, ಅದನ್ನು ಎಂ.ಓ-5 ಎಂದು ಗುರುತಿಸಲಾಯಿತು. ಆರೋಪಿತನು ಸದರಿ ಚಾಕು ಎಲ್ಲಿಂದ ತಂದನು ಎಂದು ನಾನು ನೋಡಿರುವುದಿಲ್ಲ. ಚಾಕು ಇರುವ ಜಾಗ ಯಾರು ತೋರಿಸಿದರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ವಿನಂತಿಸಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ದಿಃ 01.08.2019 ರಂದು ಮಧ್ಯಾಹ್ನ 3.00 ಗಂಟೆಯಿಂದ 4.00 ಗಂಟೆಯ ಸಮಯಕ್ಕೆ ಸಬ್ ಅರ್ಬನ್ ಬಸ್ ಸ್ಟಾಂಡ್ ಬಳಿ ಇರುವ ಸರ್ಕಾರ ವಸತಿ ಗೃಹದ, ರಸ್ತೆಯ ಪಕ್ಕದ ಒಂದು ಪೊದೆಯಲ್ಲಿ ಆರೋಪಿತನು ಬಿಸಾಕಿ ಹೋಗಿದ್ದ ಎಂ.ಓ-5 ಚಾಕುವನ್ನು ಆರೋಪಿತನು ಪೊಲೀಸರ ಹಾಗೂ ನಮ್ಮ ಮುಂದೆ ಹಾಜರುಪಡಿಸಿದನು ಎಂದು ಸೂಚಿಸುವುದು ಸರಿಯಲ್ಲ. ಅದೇ ಕಾಲದಲ್ಲಿ ನಿಪಿ-10 ಮತ್ತು ನಿಪಿ-11 ರಂತೆ ಪೋಟೋ ತೆಗೆದರು ಎಂದು ಸೂಚಿಸುವುದು ಸರಿಯಲ್ಲ. ಪೊಲೀಸರು ಆರೋಪಿ ಹಾಜರುಪಡಿಸಿದನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿದ್ದಾರೆ ಎಂದು ಸೂಚಿಸುವುದು ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು :- ಆರೋಪಿ ಪರ ವಕೀಲರಿಂದಃ-**

ಚಾಕುವಿನ ಮೇಲೆ ಯಾವುದೇ ಮಾರ್ಕ ಇರುವುದು ನಾನು ನೋಡಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು